**ಹಲವು ಮಾದರಿಗಳ ಕ್ರಿಕೆಟ್‌ಗೆ ಒಡ್ಡಿಕೊಂಡೂ ಟೆಸ್ಟ್‌ನಲ್ಲಿ ವ್ಯಸನಕ್ಕೆ ಬಿದ್ದಂತೆ ಆಡುವುದು ಸವಾಲು. ರವಿಚಂದ್ರನ್ ಅಶ್ವಿನ್ ಒಂದು ದಶಕದ ತಮ್ಮ ಕ್ರಿಕೆಟ್ ಬದುಕಿನಲ್ಲಿ ಅಂತಹ ಸಾಲು ಸಾಲು ಸವಾಲುಗಳನ್ನು ದಾಟಿಕೊಂಡೇ 394 ವಿಕೆಟ್‌ಗಳ ಮೈಲುಗಲ್ಲುಗಳನ್ನು ನೆಟ್ಟಿದ್ದಾರೆ.**

■ **ವಿಶಾಖ ಎನ್.**

ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಬಿ.ಟೆಕ್. ಓದುವಾಗಲಂತೂ ವಿಶ್ವವಿದ್ಯಾಲಯ ಮಟ್ಟದ ಕ್ರಿಕೆಟ್‌ನಲ್ಲಿ ಅಶ್ವಿನ್ ಗೆಲುವನ್ನು ತಂದೊಡ್ಡತೊಡಗಿದ್ದೇ ಮೇಷ್ಟರು–ಮೇಡಂಗಳಿಗೆ ಹಬ್ಬ. ವಾರಕ್ಕೊಂದು ಕ್ಲಾಸ್‌ಗೆ ಹಾಜರಾದರೆ ಸಾಕು, ಸ್ಪೆಷಲ್ ಕ್ಲಾಸ್ ಬೇಕಿದ್ದರೆ ಭಾನುವಾರವೂ ತೆಗೆದುಕೊಳ್ಳಲು ಸಿದ್ಧ ಎಂಬಂಥ ಬೆಂಬಲವನ್ನು ಅವರೆಲ್ಲ ಕೊಟ್ಟರು. ಹಾಜರಾತಿ ಪುಸ್ತಕದಲ್ಲಿ ಅಶ್ವಿನ್ ಹೆಸರಿನ ಎದುರು 'ಗೈರು' ಎಂದು ಮಾರ್ಕ್ ಮಾಡುವಷ್ಟು ಕಠೋರತೆ ಯಾರಿಗೂ ಇರಲಿಲ್ಲ. ಕ್ರಿಕೆಟ್ ಮೇಲೆ ಒಲವಿದೆ ಎಂಬ ಕಾರಣಕ್ಕೆ ಅಶ್ವಿನ್ ಓದನ್ನೂ ಉಪೇಕ್ಷಿಸಿರಲಿಲ್ಲ. ಶ್ರದ್ಧೆಯಿಂದ ಓದಿಯೇ ಪರೀಕ್ಷೆ ಬರೆಯುತ್ತಿದ್ದುದನ್ನೂ ಅವರೆಲ್ಲ ಕಂಡಿದ್ದರು. ಆಗಿನಿಂದಲೂ ಅಶ್ವಿನ್ ತಮ್ಮ ಬದುಕಿಗೆ ಶಿಸ್ತಿನ ಚುಚ್ಚುಮದ್ದು ಕೊಟ್ಟುಕೊಂಡರು. ಎದುರಲ್ಲಿ ಗುರಿ ಇಟ್ಟುಕೊಂಡರು. ಮಧ್ಯಮ ವೇಗದ ಬೌಲಿಂಗ್ ಮಾಡಿದರೆ ಹೇಗೆ ಎಂದು ಯೋಚಿಸುತ್ತಿದ್ದ ಅವರು ಆರಂಭಿಕ ಬ್ಯಾಟ್ಸ್‌ಮನ್ ಕೂಡ ಆದರು. ಆಮೇಲೆ ಆಫ್‌ಸ್ಪಿನ್ನರ್ ಆಗುವ ಸಂದರ್ಭ. ಹೀಗೆ ಬಗೆಬಗೆಯ ಪಾತ್ರಗಳನ್ನು ಅವರು ಕ್ರಿಕೆಟ್‌ನಲ್ಲಿ ನಿರ್ವಹಿಸುತ್ತಾ ಬಂದರೂ ಎಲ್ಲದರಲ್ಲೂ ಛಾಪು ಮೂಡಿಸಿದರು. ಈಗ ಅವರನ್ನು ಟೆಸ್ಟ್ ಕ್ರಿಕೆಟ್‌ನ ಬೌಲರ್ ಆಲ್‌ರೌಂಡರ್ ಆಗಿ ನಾವು ನೋಡುತ್ತಿದ್ದೇವೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನಲ್ಲೂ ಅವರ ಎಸೆತಗಳನ್ನು ಸಲೀಸಾಗಿ ಮೇಲಕ್ಕೆತ್ತಲು ಬ್ಯಾಟ್ಸ್‌ಮನ್‌ಗಳು ಹಿಂಜರೆಯುತ್ತಾರೆ.

ಅಶ್ವಿನ್ ಮೊದಲಿನಿಂದಲೂ ಸವಾಲುಗಳಿಗೆ ಎದೆಗೊಡುತ್ತಾ ಆಡಿದವರು. 2011ರಲ್ಲಿ ಅವರು ವಿಂಡೀಸ್ ಎದುರು 15 ವಿಕೆಟ್ ಪಡೆದದ್ದೇ ಅಲ್ಲದೆ ಗಮನಾರ್ಹವಾಗಿ ಬ್ಯಾಟಿಂಗ್ ಕೂಡ ಮಾಡಿದ್ದರು. ಆದರೂ ಆಯ್ಕೆದಾರರಿಗೆ ಅವರ ಬೌಲಿಂಗ್ ಕುರಿತು ಸಮಾಧಾನವಿರಲಿಲ್ಲ. ಈ ವಿಷಯದಲ್ಲಿ ಇದ್ದ ಗುಸುಗುಸು ಅಶ್ವಿನ್ ಕಿವಿಗೂ ಬಿದ್ದಿತ್ತು. ಅವರು ಇತ್ತೀಚೆಗೆ ಬ್ಯಾಟಿಂಗ್ ಕೋಚ್ ವಿಕ್ರಮ್ ರಾಥೋಡ್ ಅವರ ಬಳಿ ಮಾತನಾಡುತ್ತಾ, 'ಆಗ ನನ್ನನ್ನು ಕೈಬಿಡಬೇಕು ಎಂದುಕೊಂಡಿದ್ದರಂತೆ... ಅದು ನಿಜವೇ?' ಎಂದು ಕೇಳಿದ್ದರು. ಅದಕ್ಕೆ ವಿಕ್ರಮ್ 'ನಿಜ' ಎಂಬ ಉತ್ತರ ಕೊಟ್ಟಾಗ ಅಶ್ವಿನ್ ಹುಬ್ಬು ಸ್ವಲ್ಪ ಮೇಲೇರಿತು. 'ಹೊಸ ಆಟಗಾರನ ವಿಷಯದಲ್ಲಿ ಅಂತಹ ಧೋರಣೆ ತಳೆಯುವುದು ಸರಿಯಲ್ಲ, ಅಲ್ಲವೇ' ಇನ್ನೊಂದು ಪ್ರಶ್ನೆ ಹಾಕಿದರು. ವಿಕ್ರಮ್ ಅದಕ್ಕೆ ಕೊಟ್ಟ ಉತ್ತರ ಹೀಗಿತ್ತು: 'ಅಂತಹ ಗುಸುಗುಸು ನಿನ್ನ ಕಿವಿಗೆ ಬೀಳದೇ ಇದ್ದರೆ ಇಂಥ ಬೌಲರ್ ಆಗಿ ನೀನು ಬೆಳೆಯುತ್ತಲೇ ಇರಲಿಲ್ಲ'.

ಆಸ್ಟ್ರೇಲಿಯಾ ಪ್ರವಾಸದಲ್ಲಿ 12 ವಿಕೆಟ್ ಪಡೆದ ಅಶ್ವಿನ್, ಸಿಡ್ನಿ ಟೆಸ್ಟ್‌ನಲ್ಲಿ ಹನುಮ ವಿಹಾರಿ ಜತೆ ಹೋರಾಡಿ, ಪಂದ್ಯವನ್ನು ಡ್ರಾ ಮಾಡುವ ರೀತಿ ಬ್ಯಾಟಿಂಗ್ ಮಾಡಿದರು. ಅವರು ಔಟಾಗದೆ ಗಳಿಸಿದ 39 ರನ್‌ಗಳ ಆ ಇನಿಂಗ್ಸ್ ಸ್ಮರಣೀಯ. 2016ರ ನಂತರ ಅಶ್ವಿನ್ ಬೌಲಿಂಗ್ ಸಾಮರ್ಥ್ಯದ ಜತೆಗೆ ಬ್ಯಾಟಿಂಗ್ ಪ್ರದರ್ಶನವೂ ನಿಕಷಕ್ಕೆ ಒಡ್ಡಿಕೊಳ್ಳುವ ಪರಿಸ್ಥಿತಿ ಎದುರಾಯಿತು. ಜಡೇಜಾ, ಅಶ್ವಿನ್ ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವ ಪ್ರಸಂಗ ಬಂದರೆ ಎಡಗೈ ಸ್ಪಿನ್ನರ್ ಹಾಗೂ ದೊಡ್ಡ ಹೊಡೆತಗಳನ್ನು ಹೊಡೆಯಬಲ್ಲ 'ಜಡ್ಡು' ಕಡೆಗೇ ಆಯ್ಕೆಗಾರರ ನೋಟ ಹೊರಳುತ್ತದೆ. ಇದನ್ನು ಅರಿತೇ ಕಳೆದ ಹಲವು ವಾರಗಳಲ್ಲಿ ಅಶ್ವಿನ್ ತಮ್ಮ ಬ್ಯಾಟಿಂಗ್ ಅಭ್ಯಾಸವನ್ನೂ ಗಂಭೀರವಾಗಿ ಪರಿಗಣಿಸಿದ್ದು. ಅದರ ಫಲವೇ ಇಂಗ್ಲೆಂಡ್ ವಿರುದ್ಧ ಚೆನ್ನೈನ ಪಿ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಎರಡನೇ ಟೆಸ್ಟ್‌ನಲ್ಲಿ ಅವರು ಶತಕ ಗಳಿಸಿದ್ದು.

ಈಗ ಅಶ್ವಿನ್ ಬ್ಯಾಟಿಂಗ್ ಬಗೆಗೆ ಹೆಚ್ಚು ಮಾತು ಕೇಂದ್ರೀಕೃತವಾಗುತ್ತಿದೆ. ಆದರೆ, ಬೌಲರ್ ಆಗಿ ಅವರ ಸಾಧನೆ ಸ್ಮರಣೀಯ. 2017ರಲ್ಲಿ ತಮ್ಮ 45ನೇ ಟೆಸ್ಟ್ ಪಂದ್ಯದಲ್ಲೇ 300 ವಿಕೆಟ್‌ಗಳ ಗಡಿಯನ್ನು ಅವರು ದಾಟಿದರು. ಆಸ್ಟ್ರೇಲಿಯಾದ ಡೆನ್ನಿಸ್ ಲಿಲ್ಲಿ ಇಷ್ಟು ವಿಕೆಟ್‌ಗಳ ಗಡಿ ದಾಟಲು 48 ಟೆಸ್ಟ್ ಆಡಿದ್ದರು. 66ನೇ ಟೆಸ್ಟ್ ಆಡುವ ಹೊತ್ತಿಗೆ 350 ವಿಕೆಟ್‌ಗಳ ಗಡಿ ದಾಟಿದರು. ಶ್ರೀಲಂಕಾದ ಶ್ರೇಷ್ಠ ಆಫ್ ಸ್ಪಿನ್ನರ್ ಮುತ್ತಯ್ಯ ಮುರಳೀಧರನ್ ಕೂಡ ಇಷ್ಟೇ ಪಂದ್ಯಗಳಲ್ಲಿ ಆ ಸಾಧನೆ ಮಾಡಿದ್ದು. ತಮ್ಮ ತಮಿಳುನಾಡು ತಂಡ ರಣಜಿ ಟ್ರೋಫಿ ಎತ್ತಿಹಿಡಿದಾಗ ಬರೀ 20ರ ಯುವಕನಾಗಿದ್ದ ಅಶ್ವಿನ್, ಈಗ ಹೊಸ ಸವಾಲುಗಳಿಗೆ ಎದೆಗೊಟ್ಟು ಆಡುತ್ತಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಇನ್ನು 6 ವಿಕೆಟ್ ಪಡೆದರೆ 400 ವಿಕೆಟ್‌ಗಳ ಗಡಿಯನ್ನು ದಾಟಲಿರುವ ಅವರು ಐದು ಶತಕಗಳನ್ನು ಕೂಡ ಇದುವರೆಗೆ ದಾಖಲಿಸಿರುವುದು ವಿಶೇಷ. ತಮ್ಮ ಬದುಕಿನಲ್ಲಿ ಹನ್ನೊಂದು ವರ್ಷಗಳ ನಂತರ ಸ್ವೀಪ್ ಶಾಟ್‌ಗಳನ್ನು ಹೊಡೆದು ಬೌಂಡರಿಗಳನ್ನು ಗಳಿಸಿ, ಆಟವನ್ನು ಬೆಳೆಸಿ, ಇಂಗ್ಲೆಂಡ್ ವಿರುದ್ಧ ಶತಕ ಗಳಿಸಿದ ಹೆಮ್ಮೆ ಅವರದ್ದು.

ಫೆಬ್ರುವರಿ 14ರಂದು ಎಷ್ಟೋ ಜನ 'ವ್ಯಾಲೆಂಟೈನ್ಸ್ ಡೇ' ಗುಂಗಿನಲ್ಲಿ ಇರುವಾಗ ಅಶ್ವಿನ್ ಅಪರೂಪದ ದಾಖಲೆ ನಿರ್ಮಿಸಿದರು. ಸ್ಟುವರ್ಟ್ ಬ್ರಾಡ್ ವಿಕೆಟ್ ಪಡೆದದ್ದೇ ಟೆಸ್ಟ್‌ನಲ್ಲಿ 200 ಎಡಗೈ ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿದ ದಾಖಲೆಯನ್ನು ತಮ್ಮ ಹೆಸರಿಗೆ ಬರೆದುಕೊಂಡರು. ಮುರಳೀಧರನ್ 191 ಎಡಗೈ ಬ್ಯಾಟ್ಸ್‌ಮನ್‌ಗಳನ್ನು ಟೆಸ್ಟ್‌ಗಳಲ್ಲಿ ಔಟ್ ಮಾಡಿದ್ದರೆ, ಜೇಮ್ಸ್ ಆ್ಯಂಡರ್‌ಸನ್ 190 ಎಡಗೈ ಬ್ಯಾಟ್ಸ್‌ಮನ್‌ಗಳಿಗೆ ಪೆವಿಲಿಯನ್ ಹಾದಿ ತೋರಿಸಿದ್ದಾರೆ. ಅಶ್ವಿನ್ ಅವರಷ್ಟು ಎಡಗೈ ಬ್ಯಾಟ್ಸ್‌ಮನ್‌ಗಳನ್ನು ಕಾಡಿದ ಇನ್ನೊಬ್ಬ ಬೌಲರ್ ಇಲ್ಲ.

ಇಂಗ್ಲೆಂಡ್ ಎದುರು ಕೂಡ ಎರಡನೇ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿ ಬೆನ್ ಸ್ಟೋಕ್ಸ್ ವಿಕೆಟ್ ಪಡೆದದ್ದು ಇದಕ್ಕೆ ಸಾಕ್ಷಿ. ಬ್ಯಾಟ್‌ನಿಂದ ಹೊರಬದಿಗೆ ತಿರುವು ಪಡೆಯುವ ಅಥವಾ 'ಡ್ರಿಫ್ಟ್ ಆಗುವ' (ಸರಕ್ಕನೆ ನೇರವಾಗಿ ನುಗ್ಗಿಬರುವ) ಎಸೆತಗಳನ್ನು ಅಶ್ವಿನ್ ಎಡಗೈ ಬ್ಯಾಟ್ಸ್‌ಮನ್‌ಗಳಿಗೆ ಹಾಕುವುದೇ ಈ ಯಶಸ್ಸಿಗೆ ಕಾರಣ. ಭಾರತದ ನೆಲದಲ್ಲಿ ಇದುವರೆಗೆ 45 ಟೆಸ್ಟ್‌ಗಳಿಂದ 268 ವಿಕೆಟ್‌ಗಳನ್ನು ತಮ್ಮ ಖಾತೆಗೆ ಅಶ್ವಿನ್ ಹಾಕಿಕೊಂಡಿದ್ದಾರೆ. ಹರಭಜನ್ ಸಿಂಗ್ 265 ವಿಕೆಟ್ ಪಡೆದಿದ್ದನ್ನು ಓವರ್‌ಟೇಕ್ ಮಾಡಿದ ಸಾಧನೆ ಇದು. 29 ಸಲ ಐದು ವಿಕೆಟ್ ಗೊಂಚಲನ್ನು ದಕ್ಕಿಸಿಕೊಂಡು ಗ್ಲೆನ್ ಮೆಕ್‌ಗ್ರಾ ದಾಖಲೆಗೆ ಸರಿಸಮವಾಗಿರುವ ಅಶ್ವಿನ್ ಅಂಕಿಅಂಶಗಳನ್ನು ಕೆದಕುತ್ತಾ ಹೋದಷ್ಟೂ ಹೊಸ ಹೊಳಹುಗಳು ಕಣ್ಣರಳಿಸುವಂತೆ ಮಾಡುತ್ತವೆ. ಬೆನ್ ಸ್ಟೋಕ್ಸ್ ಅವರನ್ನು ಇದುವರೆಗೆ ಟೆಸ್ಟ್ ಪಂದ್ಯಗಳಲ್ಲಿ 19 ಸಲ ಅವರು ಔಟ್ ಮಾಡಿದ್ದಾರೆನ್ನುವುದು ಅಂತಹ ಒಂದು ಗಮನಾರ್ಹ ಹೊಳಹು.

ಸ್ಪಿನ್ ಮಾಂತ್ರಿಕರನ್ನು ದಕ್ಷಿಣ ಭಾರತ ಹೆಚ್ಚಾಗಿ ನೀಡಿದೆ. ಬಿ.ಎಸ್. ಚಂದ್ರಶೇಖರ್, ಯರ್ರಪಳ್ಳಿ ಪ್ರಸನ್ನ, ವೆಂಕಟ ರಾಘವನ್, ವೆಂಕಟಪತಿ ರಾಜು, ಅನಿಲ್ ಕುಂಬ್ಳೆ ಇವರೆಲ್ಲ ಆ ಯಾದಿಯಲ್ಲಿ ಕಾಣುತ್ತಾರೆ. ನಡುವೆ ಹರಭಜನ್ ಸಿಂಗ್ ಬಂದು ಕುಂಬ್ಳೆ ಬ್ಯಾಟನ್ ಅನ್ನು ಪಡೆದುಕೊಂಡಿದ್ದರು. ಅದನ್ನು ಇಸಿದುಕೊಂಡ ಮೇಲೆ ಅಶ್ವಿನ್ ಕೂಡ ಅದೇ ಪಥದಲ್ಲಿ ಸಾಗುತ್ತಿರುವುದು ಕ್ರಿಕೆಟ್‌ನ ಸೊಗಸುಗಾರಿಕೆ.

ಪ್ರತಿಕ್ರಿಯಿಸಿ: feedback@sudha.co.in

